# ಮಾತು ಮುಗಿದೇ ಇಲ್ಲ ಇನ್ನು



ಮರೆತು ಎದ್ದು ಹೋದೆಯಾ?...

ಹರಸಿ ನಡೆದೆ ಬಿಟ್ಟೆಯಾ
ಕಾಣದೂರಿನ ದಾರಿ ಹಿಡಿದು
ನನ್ನ ಹೀಗೆ ಯಾಕೊ ತೊರೆದು
ಹುಡುಕಲಿ ಹೇಗೆ ನಿನ್ನನು

ಕಾದೆ ನಾನು ಬರುವವರೆಗು
ಕೊನೆ ಕ್ಷಣದಲು ಉಸಿರ ತಡೆದು
ಈ ನೆತ್ತಿ ಮೇಲೆ ಕೈಯ ಸೋಕಿ
ಹರಸಿ ನಡೆದೇ ಬಿಟ್ಟೆಯಾ...

ಬೇಡಲಿ ಯಾರ ಕೈಯ ತುತ್ತು,
ಕಾಡಿದಾಗ ಹಸಿವ ನೋವು
ಕಾಯಲಿ ಯಾರಿಗೆ ಕದವ ತೆರೆದು,
ಸಂಜೆ ಹೀಗೆ ಮುಳುಗಿದಾಗ
ಒರೆಸಲಿ ಯಾರ ಬೆವರ ಹನಿಯ
ದುಡಿದು ತಣಿದು ಬರುವ ವೇಳೆ
ಒರಗಲಿ ಹೇಳು ಯಾರ ಎದೆಗೆ,
ಮರೆಯಲೆನ್ನ ನೋವನು!

ಹಸಿದು ದುಡಿದೆ ಅನ್ನ
ತುಂಬಲೆಮಗೆ ಪ್ರೀತಿಯನ್ನ
ಮರಣನೋವ ಮರೆಮಾಚಿ
ಹುಸಿನಗೆಯನು ಮಾಡುತಾ
ಕಣ್ಣಿಗಪ್ಪಿಕೊಂಡೆ ಎನ್ನ,
ಹರಸಿ ನಡೆದೇ ಬಿಟ್ಟೆಯಾ

ನಾ ದೇವರೆನ್ನಲೇಕೆ ನಿನ್ನ
ಬೇಡಿದನ್ನು ನೀಡಿದೆ
ಏನೂ ಬೇಡದೆಯೂ
ಸರ್ವಸ್ವವನ್ನೂ ಕೊಟ್ಟೆ ನೀನು
ನೀ ನನ್ನ ಅಪ್ಪನು
ಹರಸಿ ನಡೆದೇ ಬಿಟ್ಟೆಯಾ
ಕಳಿಸಬೇಕು ಅಂಚೆಯೊಂದ
ಮಾತು ಮುಗಿದೇ ಇಲ್ಲ ಇನ್ನು
ಮರೆತು ಎದ್ದು ಹೋದೆಯಾ
ಹುಡುಕಲೇಗೆ ನಿನ್ನನು?

● ಡೋ.ರ

ಕಲೆ: ಬಸವರಾಜಾಚಾರ್ ಕೆ.ಆರ್